# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI




ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2018-20
Date of Posting, Kodialbail Post Office
on 12th of every Month

ಸಂಪುಟ-9 Reg. No. : KARBIL/2005/16123 ಅಗೋಸ್ತು - 2020 ಪುಟ:8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ-8 ಪ್ರಕಟಣೆ : 10-08-2020

● e-mail : jnanashakthisss@gmail.com ● whatsapp : 7795116598 ● Mobile : 9343361618


## ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅನುಗ್ರಹ ಸಂದೇಶ



ವಿದ್ಯೆ, ಸಂಪತ್ತು ಮತ್ತು ಉದ್ಯೋಗಗಳು ಮನುಷ್ಯನ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಆದರೆ ಅವುಗಳ ಸಂಗಡ ಮಾನವೀಯತೆ, ಔದಾರ್ಯ ಮತ್ತು ಅನ್ಯರ ಬಗ್ಗೆ ಗೌರವ ಮುಂತಾದ ಸದ್ಗುಣಗಳು ಇದ್ದರೆ ಮಾತ್ರ ಮನುಷ್ಯನ ಘನತೆ ಹೆಚ್ಚುತ್ತದೆ. ಈ ಸದ್ಗುಣಗಳು ಇಲ್ಲದಿದ್ದರೆ ಒಣಜಂಭವು ಮನುಷ್ಯನನ್ನು ಆವರಿಸಿ ಇತರರಿಗೆ ಗೌರವ ತೋರಿಸದೆ ಅವರಿಗೆ ಹಿಂಸೆ ಮತ್ತು ದುಃಖವನ್ನು ತಂದೊಡ್ಡುತ್ತವೆ. ಇಂತಹ ಸ್ವಭಾವವು ಹತೋಟಿಯಲ್ಲಿ ಇರದಿದ್ದರೆ ಮನುಷ್ಯನು ತನ್ನ ಪತನಕ್ಕೆ ತಾನೇ ಕಾರಣನಾಗುತ್ತಾನೆ. ಅಲ್ಲದೆ ಸಮಾಜದ ಅವಗಣನೆಗೆ ಪಾತ್ರನಾಗುತ್ತಾನೆ. ಆದ್ದರಿಂದ ಜೀವನದಲ್ಲಿ ಶ್ರೇಯೋಮಾರ್ಗದಲ್ಲಿ ಇರುವಾಗ ಪ್ರತಿಯೊಬ್ಬರೂ ಹಿರಿಯರ ಆಶೀರ್ವಾದ ಮತ್ತು ಮಾರ್ಗದರ್ಶನಗಳನ್ನು ಪಡೆಯಬೇಕು.

ಹಿರಿಯರನ್ನು ಗೌರವಿಸಿ ಆದರಿಸುವುದು ಮನುಷ್ಯನ ಶ್ರೇಯಸ್ಸಿಗೆ ಕಾರಣವಾದ ಮುಖ್ಯ ಗುಣಗಳು. ಅದರಿಂದ ಜೀವನದಲ್ಲಿ ಸುಖ, ಸಂತೋಷಗಳು ವೃದ್ಧಿಯಾಗುತ್ತವೆ.

ಆದರೆ ಇತ್ತೀಚೆಗಿನ ದಿನಗಳಲ್ಲಿ ಅಸಮ್ಮತವಾದ ಕಾರಣಗಳಿಂದ ತಂದೆ-ತಾಯಿಯರನ್ನು ವೃದ್ಧಾಶ್ರಮಗಳಿಗೆ ಸೇರಿಸುತ್ತಿರುವ ಘಟನೆಗಳು ಹೆಚ್ಚಾಗುತ್ತಿವೆ. ಇದು ಖಂಡಿತ ಒಪ್ಪತಕ್ಕ ವಿಷಯವಲ್ಲ. ಮನುಷ್ಯನು ಹಿರಿಯರ ಬಗ್ಗೆ ಪ್ರೀತಿ, ಗೌರವದಿಂದ ವರ್ತಿಸಿ ಅವರ ಸೇವೆಯನ್ನು ಮಾಡಬೇಕು. ಈ ಕರ್ತವ್ಯದಿಂದ ಕೀರ್ತಿ, ಆರೋಗ್ಯ ಮತ್ತು ದೀರ್ಘಾಯುಷ್ಯವು ಲಭಿಸುವುದು.

ಆದ್ದರಿಂದ ಎಲ್ಲರೂ ಹಿರಿಯರನ್ನು ಗೌರವಿಸಿ, ಪ್ರೀತಿಯಿಂದ ಅವರ ಸೇವೆಯನ್ನು ಮಾಡುತ್ತಾ ಕೀರ್ತಿ ಮತ್ತು ಯಶೋವಂತರಾಗಿ ಬಾಳುವಂತೆ ಆಗಲಿ ಎಂದು ಆಶೀರ್ವದಿಸುತ್ತೇವೆ.

***ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।***
***ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾಯಶೋಬಲಮ್ ॥***

**ಕೃಪೆ : 'ಶ್ರೀ ಶಂಕರ ಕೃಪಾ'**

## ಚಾತುರ್ಮಾಸ ಪ್ರಯುಕ್ತ ಶೃಂಗೇರಿಯಾತ್ರೆ



ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಮತ್ತು ತತ್ಕರಕಮಲ ಸಂಜಾತ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಸನ್ನಿಧಾನಂಗಳವರ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರಿನಿಂದ (ಕೊರೋನಾ ಪ್ರಯುಕ್ತ) ಸೀಮಿತ ಭಕ್ತರು ಶೃಂಗೇರಿ ಯಾತ್ರೆ ತೆರಳಿದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರಿ ಹರ್ಷಕುಮಾರ್ ಕೇದಿಗೆ, ಕಾರ್ಯದರ್ಶಿಗಳಾದ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರುಗಳಾದ ಶ್ರೀ ರಘುವೀರ್ ಪೆರ್ಡೂರು, ಶ್ರೀ ಉದಯ ಕುಮಾರ್ ರಾವ್, ಶ್ರೀ ಅನಿಲ್ ಎನ್., ಶ್ರೀ ಮುರಳಿ ಅದ್ಯಪಾಡಿ, ಶ್ರೀ ಐ. ಪಿ. ನಾಗರಾಜ್ ರಾವ್, ಶ್ರೀ ಬಿ. ರವೀಂದ್ರ, ಶ್ರೀ ಗಣೇಶ್ ರಾವ್, ಶ್ರೀಮತಿ ಲತಾ ರಘುವೀರ್, ಶ್ರೀಮತಿ ಭುವನೇಶ್ವರಿ ನಾಗರಾಜ್, ಶ್ರೀ ವಿಜಯ ಕುಮಾರ್ ಅದ್ಯಪಾಡಿ, ಶ್ರೀ ಸಭಾದ ಲೆಕ್ಕಪರಿಶೋಧಕರಾದ ಶ್ರೀ ನಾಗರಾಜ ಶರ್ಮ, ಶ್ರೀ ಸಂಜಯ್, ಶ್ರೀ ಶ್ರವಣ್, ಶ್ರೀ ಸಚಿನ್ ಇವರನ್ನೊಳಗೊಂಡ ತಂಡ ಪಾದಪೂಜೆ, ಭಿಕ್ಷಾವಂದನೆ ನಡೆಸಿ, ಹೊರೆಕಾಣಿಕೆ ಸಮರ್ಪಿಸಿ ಉಭಯ ಗುರುಗಳಿಂದ ಫಲ ಮಂತ್ರಾಕ್ಷತೆ ಪಡೆದು ಕೃತಾರ್ಥರಾದರು. ಶೃಂಗೇರಿಯ ಗ್ರಾಮದೇವತೆ ಶ್ರೀ ಮಲಹಾನಿಕೇಶ್ವರ ದೇವಸ್ಥಾನಕ್ಕೂ ಭೇಟಿ ನೀಡಿ ದರ್ಶನ ಪಡೆದರು.

**ಚಿತ್ರ : ಶ್ರೀ ರಘುವೀರ್, ಪೆರ್ಡೂರು**

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್, ಪುತ್ತೂರು
ಮೊಬೈಲ್ : 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618


ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ, ರಘುವೀರ್ ಪೆರ್ಡೂರು
ಟಿ.ಬಿ. ಮೋಹನ್ ರಾವ್, ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ, ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ


# ನಾಗರಪಂಚಮಿ ಆಚರಣೆ



ಬಾರಕೂರು ಧರ್ಮಶಾಲೆ ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನದಲ್ಲಿನ ನಾಗಸನ್ನಿಧಿಯಲ್ಲಿ ನಾಗರಪಂಚಮಿ ಪ್ರಯುಕ್ತ ಪಂಚಾಮೃತ ಅಭಿಷೇಕ, ಎಳನೀರು ಅಭಿಷೇಕ ಹಾಗೂ ವಿವಿಧ ಸೂಕ್ತಾಭಿಷೇಕ, ಮಹಾಪೂಜೆ ಜರುಗಿತು.



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ ವತಿಯಿಂದ ನಾಗರಪಂಚಮಿಯನ್ನು ದೇವಸ್ಥಾನದಲ್ಲಿ ಸರಳವಾಗಿ ಆಚರಿಸಲಾಯಿತು. ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ್ ಹೆಬ್ಬಾರ್ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿದ್ದರು.

## ಶ್ರೀ ಶಂಕರ ಪ್ರತಿಷ್ಠಾನ, ಪ್ರಸಾದ ಭವನ, ತೆಳ್ಳಾರು ರಸ್ತೆ, ಕಾರ್ಕಳ – 574 104

### ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಪ್ರತಿ ವರ್ಷದಂತೆ ಈ ವರ್ಷವೂ ಕಾರ್ಕಳ ತಾಲೂಕು ಸ್ಥಾನಿಕ ಬ್ರಾಹ್ಮಣ ಸಮಾಜದ ಪ್ರತಿಭಾವಂತ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯಲ್ಲಿ 75% ಮತ್ತು ಅದಕ್ಕಿಂತ ಮೇಲ್ಪಟ್ಟು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನಮ್ಮ ಸಂಘದ ವಾರ್ಷಿಕೋತ್ಸವದಂದು ಅಥವಾ ನಿಗದಿಪಡಿಸಿದ ದಿನದಂದು ಕೊಡಮಾಡಲಾಗುವುದು. ವಿದ್ಯಾರ್ಥಿಗಳು ಈ ಕೆಳಕಂಡ ವಿಳಾಸಕ್ಕೆ ತಮ್ಮ ಅರ್ಜಿಯೊಂದಿಗೆ (ಮೊಬೈಲ್ ನಂಬರ್, ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಿ) ಅಂಕಪಟ್ಟಿಯನ್ನು ದಿನಾಂಕ 16–08–2020ರ ಒಳಗೆ ಕಳುಹಿಸಬೇಕು. ಈ ವಿದ್ಯಾರ್ಥಿ ವೇತನವು ಸ್ಥಾನಿಕ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತ.

**ನೀವು ಸಂಪರ್ಕಿಸಲು :**

**ಶ್ರೀ ಕೇಶವ ರಾವ್,** ಅಧ್ಯಕ್ಷರು, ಶ್ರೀ ಶಂಕರ ಪ್ರತಿಷ್ಠಾನ ✆ : 9902332609
**ಶ್ರೀ ಹರಿಶ್ಚಂದ್ರ ರಾವ್,** ಕಾರ್ಯದರ್ಶಿ ✆ : 9482623212
**ಶ್ರೀ ರತ್ನಾಕರ ರಾವ್ ಕೊಕ್ರಾಡಿ,** ಸಂಚಾಲಕರು, ವಿದ್ಯಾನಿಧಿ ✆ : 9739460025

**ಅಂಕಪಟ್ಟಿಯ ಪ್ರತಿ ಹಾಗೂ ಅರ್ಜಿಯನ್ನು ಕಳುಹಿಸಲು ವಿಳಾಸ :**
**ಶ್ರೀ ರತ್ನಾಕರ ರಾವ್ ಕೊಕ್ರಾಡಿ,** ಸಂಚಾಲಕರು
ವಿದ್ಯಾನಿಧಿ, 'ನಂದನ' ಚತುರ್ಮುಖ ಬಸದಿ ಬಳಿ, ಕಾರ್ಕಳ - 574 104


Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)



Prop. : *Kishore Kumar Kedige*
Ph. : 2231524
M. : 9880726325



**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*



ಪತ್ರಿಕೆಗೆ ಶುಭ ಬಯಸುವ–
**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–
**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services



1st Floor, Bharath Building, P. M. Rao Road, Hampankatta, Mangaluru - 575 001

Muralidhara Rao Adyapadi
Proprietor
Mob : 94480 27259
99803 16434



**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles,
A.C., D.C. Cases, Land Conversion, Registration etc.

# *** ಅಪಾರ ಕೀರ್ತಿ ಗಳಿಸಿ ***



ಬೈಲೂರಿನ **ಕು| ಪ್ರಜ್ಞಾಶ್ರೀ ಹೆಬ್ಬಾರ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗ ಪರೀಕ್ಷೆಯಲ್ಲಿ ಶೇಕಡಾ 95.5 (573/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಬೈಲೂರಿನ ಶ್ರೀಮತಿ ಪೂರ್ಣಿಮ ಮತ್ತು ಶ್ರೀ ಶ್ರೀನಿವಾಸ ಹೆಬ್ಬಾರ್‌ರ ಸುಪುತ್ರಿ ಹಾಗೂ ಕಾರ್ಕಳದ ಜ್ಞಾನಸುಧಾ ಕಾಲೇಜಿನ ವಿದ್ಯಾರ್ಥಿನಿ.

ಬೆಂಗಳೂರಿನ **ಕು| ಸಂಜನಾ ರಾವ್** ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇಕಡಾ 98.6 (592/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಯಲಹಂಕದ ಶ್ರೀ ಅನಾರು ಯೋಗೀಶ್ ರಾವ್ ಮತ್ತು ಶ್ರೀಮತಿ ಸುಮನಾ ರಾವ್‌ರವರ ಸುಪುತ್ರಿ.



**ಕು| ನಿಖಿತಾ ರಾವ್** ಈ ಬಾರಿಯ ಪಿ.ಯು.ಸಿ. ವಾಣಿಜ್ಯ ವಿಭಾಗ ಪರೀಕ್ಷೆಯಲ್ಲಿ ಶೇಕಡಾ 92.6 (556/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಕರಂದಾಡಿ ಶ್ರೀ ರಾಘವೇಂದ್ರ ರಾವ್ ಮತ್ತು ಶ್ರೀಮತಿ ರಮಾದೇವಿ ರಾವ್‌ರವರ ಸುಪುತ್ರಿ ಹಾಗೂ ಮಂಗಳೂರಿನ ಸೈಂಟ್ ಅಲೋಶಿಯಸ್ ಪಿ.ಯು. ಕಾಲೇಜಿನ ವಿದ್ಯಾರ್ಥಿನಿ.

ಮಂಗಳೂರಿನ **ಕು| ಪ್ರಾರ್ಥನಾ ಎಂ. ರಾವ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇಕಡಾ 93 (559/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಮುರಳೀ ಅದ್ಯಪಾಡಿ ಮತ್ತು ಶ್ರೀ ಪವಿತ್ರಾರವರ ಸುಪುತ್ರಿ ಹಾಗೂ ಮಂಗಳೂರಿನ ಶಾರದಾ ವಿದ್ಯಾಲಯದ ವಿದ್ಯಾರ್ಥಿನಿ.





ಮಂಗಳೂರಿನ **ಕು| ಶ್ರೇಯಾ ರಾವ್** ಈ ಬಾರಿಯ ಪಿ.ಯು.ಸಿ. ವಾಣಿಜ್ಯ ವಿಭಾಗದಲ್ಲಿ ಶೇಕಡಾ 95 (570/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಕೆ. ರಾಜೇಂದ್ರ ಕುಮಾರ್ ಮತ್ತು ಶ್ರೀಮತಿ ಸುಕನ್ಯರವರ ಸುಪುತ್ರಿ ಹಾಗೂ ಮಂಗಳೂರಿನ ಶಾರದಾ ಪಿ.ಯು. ಕಾಲೇಜಿನ ವಿದ್ಯಾರ್ಥಿನಿ.



ಮೈಸೂರಿನ **ಕು| ಅದಿತಿ ಎ. ರಾವ್** ಈ ಬಾರಿ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇಕಡಾ 98.6 (592/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಅಶೋಕ ರಾವ್ ಮತ್ತು ಶ್ರೀಮತಿ ಆಶಾರವರ ಸುಪುತ್ರಿ ಹಾಗೂ ಸಂಕಲ್ಪ ಗೋಪಾಲಸ್ವಾಮಿ ಪಿ.ಯು. ಕಾಲೇಜು ಮೈಸೂರಿನ ವಿದ್ಯಾರ್ಥಿನಿ.

**ಕು| ಅದಿತಿ ದಿನಮಣಿ ಭಟ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗ ಪರೀಕ್ಷೆಯಲ್ಲಿ ಶೇಕಡಾ 95.6 (574/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ದಿನಮಣಿ ಭಟ್ ಮತ್ತು ಶ್ರೀಮತಿ ಅನುರಾಧ ಭಟ್‌ರವರ ಸುಪುತ್ರಿ ಹಾಗೂ ಮಂಗಳೂರಿನ ಶಾರದಾ ಕಾಲೇಜಿನ ವಿದ್ಯಾರ್ಥಿನಿ.





**ಗುಂಡೂರಿನ ಕು| ಮೇದಿನಿ ಎಚ್.** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇಕಡಾ 83.3% (530/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಪಾಣೆಮಂಗಳೂರಿನ ಶ್ರೀ ಸುಬ್ರಹ್ಮಣ್ಯ ರಾವ್ ಮತ್ತು ಶ್ರೀಮತಿ ಭಾರತೀ ರಾವ್‌ರವರ ಪುತ್ರಿ ಹಾಗೂ ಕಲ್ಲಡ್ಕ ಶ್ರೀರಾಮ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ.

ಮಂಗಳೂರಿನ **ಕು| ಅಭಿಜ್ಞಾ ನಂದಿಕೂರು** ಈ ಬಾರಿ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇಕಡಾ 96 (573/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ವಸಂತ್ ನಂದಿಕೂರು ಮತ್ತು ಶ್ರೀಮತಿ ರಾಜೇಶ್ವರಿಯವರ ಸುಪುತ್ರಿ ಮತ್ತು ಮಂಗಳೂರಿನ ಕೆನರಾ ಪಿ. ಯು. ಕಾಲೇಜಿನ ವಿದ್ಯಾರ್ಥಿನಿ.





ಮೂಡಬಿದಿರೆಯ **ಚಿ| ಪ್ರದೀಪ್ ರಾವ್ ಕೆ.** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇಕಡಾ 95.83 (575/600) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಇವನು ಕೊಕ್ರಾಡಿ ದೇವಸ್ಥಾನದ ಪುರೋಹಿತರಾದ ಶ್ರೀ ಸುಬ್ರಹ್ಮಣ್ಯ ರಾವ್ ಕೆ. ಮತ್ತು ಶ್ರೀಮತಿ ಕವಿತಾ ದಂಪತಿಗಳ ಸುಪುತ್ರ ಹಾಗೂ ಮೂಡಬಿದಿರೆ ಜೈನ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ.


*Prop. : P. Srikanth Rao* Mobile : 9343361618

**M/s. SAMARPAN**

**HOUSE OF STATIONERY**

**"Vijaya Nivas", Opp. Pio Mall**
**Bejai Church Road, Mangalore - 4**



ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮ ನವೀನ್ ಕುಮಾರ್**
**ಶ್ರೀಮತಿ ರೇಷ್ಮ, ಶ್ರೀ ವಸಂತ್ ಕುಮಾರ್, ಅನೀಶ್ ರಾವ್**
**ಶ್ರೀಮತಿ ಸುಶ್ಮ, ಶ್ರೀ ಶಿವಾನಂದ ರಾವ್ ಹಾಗೂ ಅಂಜನ್ ರಾವ್**

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex, Church Building**
**Main Road, BAJPE, MANGALORE**



***We undertake all types of Electrical, Plumbing and Sanitary works***

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

ನನ್ನ ದೃಷ್ಟಿಯಲ್ಲಿ

# ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶ 2020

ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು ಹಾಗೂ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಂಗಳೂರು ಇವರ ಜಂಟಿ ಆಶ್ರಯದಲ್ಲಿ ಹಾಗೂ ನಮ್ಮ ಸಮಾಜದ ವಿವಿಧ ಸಂಘ–ಸಂಸ್ಥೆಗಳ ಸಹಯೋಗ ದೊಂದಿಗೆ ವಿಶ್ವದಾದ್ಯಂತವಿರುವ ಸ್ಥಾನಿಕ ಬ್ರಾಹ್ಮಣ ಸಮಾಜದ ಬಂಧುಗಳ ಭಾವೈಕ್ಯದ ಪ್ರತೀಕವಾಗಿ ಚಿಗುರೊಡೆ ದಂತಹ ವಿವಿಧ ಸಂಘ–ಸಂಸ್ಥೆಗಳ ಸಮಾನ ಮನಸ್ಕರು ಒಂದಾದಂತಹ ಹಾಗೂ ನಮ್ಮ ಬಾಂಧವ್ಯವನ್ನು ಮತ್ತಷ್ಟು ಬೆಸೆದಂತಹ ಒಂದು ವಿಶಿಷ್ಟ ಕಾರ್ಯಕ್ರಮ ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶ 'ಉತ್ಸವ'. ಜನವರಿ 11 ಮತ್ತು 12ರಂದು ಬಹಳ ಅದ್ದೂರಿಯಾಗಿ, ಅರ್ಥಪೂರ್ಣವಾಗಿ ಬೆಂಗಳೂರಿನ ಕೋಡಿಗೆಹಳ್ಳಿ 'ಜ್ಞಾನಶಕ್ತಿ ಮಂಟಪ'ದಲ್ಲಿ ಸಂಪನ್ನಗೊಂಡಿತು.




ಹೆಬ್ಬೂರು ಕೋದಂಡಾಶ್ರಮ ಮಠ ಘನಪುರಿ ಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರ ದಿವ್ಯಹಸ್ತದಿಂದ ಉದ್ಘಾಟನೆಗೊಂಡ ಸಮಾವೇಶ 2 ದಿನಗಳಲ್ಲಿ ವಿವಿಧ ವಿಚಾರಗೋಷ್ಠಿಗಳು : ವಿಶೇಷವಾಗಿ ಯುವಕರಿಗೆ ವೇದಿಕೆ, ಮಹಿಳೆಯರಿಗೆ ಪ್ರಾಧಾನ್ಯತೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಪ್ರತಿಭೆಗಳಿಗೆ ಅವಕಾಶ, ಅನೇಕ ವಿಚಾರಧಾರೆಗಳ ಚಿಂತನ ಮಂಥನಗಳು, ಸನಾತನ ಧರ್ಮಬೋಧನೆಯ ಪಾಠ–ಪ್ರವಚನಗಳು, ಸಂಬಂಧಗಳನ್ನು ಬೆಸೆಯುವ ವಿವಾಹ ವೇದಿಕೆಗಳು – ಹೀಗೆ ಪರಸ್ಪರ ಸಂವಹನ, ಸಂಪ್ರೀತಿಯ ಸೊಬಗಿನ ಉತ್ಸವವಾಗಿ ಮೂಡಿಬಂತು ಈ ವಿಶ್ವ ಸ್ಥಾನಿಕ ಸಮಾವೇಶ.

**ಸಮಾವೇಶಕ್ಕೆ ತುರಾಯಿ ಮೂಡಿಸಿದ ಸನ್ಮಾನಗಳು :**

ಸಮಾರೋಪ ಸಮಾರಂಭದ ವೇದಿಕೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಲವಾರು ಸಾಧಕರನ್ನು ಗುರುತಿಸಿ ಸನ್ಮಾನಿಸಲಾಯಿತು. ಅದರಲ್ಲಿ ವಿಶೇಷವಾಗಿ ನಮ್ಮ ಸ್ಥಾನಿಕ ಸಂಘ ಪಡುಬಿದ್ರಿಯಿಂದ ಸಂಘಟನಾ ಚತುರರಾದ ಹಾಗೂ ಪಡುಬಿದ್ರಿ ವ್ಯಾಪ್ತಿಯ ಮೂರು ದೇವಸ್ಥಾನಗಳ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಸಂಘದ ನಿರ್ದೇಶಕರಾದ ಶ್ರೀ ಎಂ. ಕೆ. ದಿವಾಕರ ರಾವ್; ಉದ್ಯಮ ಕ್ಷೇತ್ರದಲ್ಲಿ ಅಪಾರ ಯಶಸ್ಸನ್ನು ಗಳಿಸಿದ, ಮಹಾಮಂಡಲದ ಜೊತೆಕಾರ್ಯದರ್ಶಿಯಾದ ಹಾಗೂ ಪಡುಬಿದ್ರೆ ಸಂಘದ ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಎಸ್. ಜನಾರ್ದನ ರಾವ್, ನಂದಿಕೂರು; ಕ್ರೀಡಾಕ್ಷೇತ್ರದಲ್ಲಿ ಹಿರಿಯ ವಯಸ್ಸಿನಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ಹಿರಿದಾದ ಸಾಧನೆಯನ್ನು ಮಾಡಿದಂತಹ ಶ್ರೀ ಕುಮಾರಸ್ವಾಮಿ; ಶಿಕ್ಷಣ ಕ್ಷೇತ್ರದಲ್ಲಿ M.Sc.ಯಲ್ಲಿ ಚಿನ್ನದ ಪದಕ ಗಳಿಸಿದ ಕು। ಅಕ್ಷತಾ ಹಾಗೂ ಕ್ರೀಡಾಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ಅನನ್ಯ ಸಾಧನೆ ಮಾಡಿದ ಕು। ತಾನ್ಯ ನಂದಿಕೂರು ಇವರನ್ನು ಸನ್ಮಾನಿಸಿರುವುದು ಸಂಘದ ಹಿರಿಮೆ ಹಾಗೂ ಗರಿಮೆಗೆ ಹೊನ್ನಕಲಶ ಇಟ್ಟಂತಾಗಿದೆ. ಅಷ್ಟೇ ಅಲ್ಲದೆ ನಮ್ಮ ಸಂಘದಿಂದ ಸುಮಾರು 75 ಮಂದಿ ಈ ಎರಡೂ ದಿನಗಳ ಮಹೋನ್ನತ ಕಾರ್ಯದಲ್ಲಿ ಭಾಗಿಯಾದ ತೃಪ್ತಿ ಹಾಗೂ ಅನುಭವ ನಮ್ಮದು.

ಗೌರವಾನ್ವಿತ ಅತಿಥಿ–ಅಭ್ಯಾಗತರ ಧ್ವನಿ, ವರ್ಚಸ್ಸು, ದೇಹಭಾಷೆ, ವಿಷಯ ಜ್ಞಾನ, ಅವರ ಮಾತಿನ ಓಘ, ವೇಗ, ಸಜ್ಜನಿಕೆಯ ಮಾತು ಹೃದಯಂಗಮ. ಎಲ್ಲವೂ ಅನನ್ಯ–ಅನುಪಮ–ಅಸದೃಶ. ಎಲ್ಲವೂ ಕೂಡಾ ವಿಶೇಷವಾದ ಅನುಭವವನ್ನು ನೀಡಿತು. ಇಲ್ಲಿ ನಾವು ನೆನೆಯಲೇಬೇಕಾದ ಒಂದು ವಿಷಯ ಆತಿಥ್ಯ. ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ, ಬೆಂಗಳೂರು ಇದರ ಅಧ್ಯಕ್ಷರು ಹಾಗೂ ಸಮ್ಮೇಳನಾಧ್ಯಕ್ಷರಾದಂತಹ ಶ್ರೀ ರವೀಂದ್ರನಾಥ ಬೆಳ್ಳೆಯವರ ನೇತೃತ್ವದಲ್ಲಿ ಇವರ ತಂಡ ನೀಡಿದ ಆತಿಥ್ಯ ಬಂದವರಿಗೆ ವಸತಿ ಸೌಕರ್ಯ, ಸ್ವಾಗತ, ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಊಟ ಎಲ್ಲವೂ ಕೂಡಾ ಪ್ರೀತಿಯ ಧಾರೆಯನ್ನು ಎರೆದು, ಆತ್ಮೀಯತೆಯನ್ನು ಬೆರೆಸಿದಂತಿತ್ತು. ಎಲ್ಲರ ಬಾಯಲ್ಲೂ ಆತಿಥ್ಯದ ಬಗ್ಗೆ ಪ್ರಶಂಸೆಯ ಸುರಿಮಳೆ, ಒಟ್ಟಾರೆ ಯೋಜನೆ, ಯೋಚನೆ, ಚಿಂತನೆ ನಡೆಸಿ ಸಮ್ಮೇಳನವನ್ನು ರೂಪಿಸಿರುವುದು ಸರ್ವತ್ರ ಶ್ಲಾಘನೆಗೆ ಪಾತ್ರವಾಗಿದೆ. ಇಂತಹ ಒಂದು ವಿಶಿಷ್ಟವಾದಂತಹ ಸಮಾವೇಶದ ಆಯೋಜನೆಗೆ ಅಹರ್ನಿಶಿಯಾಗಿ ದುಡಿದ ಎಲ್ಲಾ ಪದಾಧಿಕಾರಿಗಳನ್ನು ಹಾಗೂ ವಿಶೇಷವಾಗಿ ಮಹಾಮಂಡಲದ ಅಧ್ಯಕ್ಷರನ್ನು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಅಧ್ಯಕ್ಷರನ್ನು ಹಾಗೂ ಕಾರ್ಯದರ್ಶಿಗಳನ್ನು ವಂದಿಸಿಕೊಳ್ಳುತ್ತಿದೆ ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರೆ.

**ವರದಿ : ಶ್ರೀಮತಿ ರಮ್ಯಾ ಅರುಣ್ ರಾವ್, ಮುಂಡ್ಕೂರು**
ಕಾರ್ಯದರ್ಶಿ, ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ
ಮೊ : 9945166320

**PREETHIKA AUTOMOBILES**
2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils


**PRAMOD AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR




ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದ್ಯುತಿ ಮತ್ತು ಧ್ರುವ್**

# ಶ್ರೀ ಸ್ಥಾನಿಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಪಾಲನಾ ಸಭಾ, ಮಂಗಳೂರು
## ಈ ಸಂಘ ಹೇಗೆ ಮೂಡಿತು ಮತ್ತು ಏಕೆ ಬೇಕು?

ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಷತ್ ಬೆಂಗಳೂರಿನಲ್ಲಿ ಸ್ಥಾಪನೆಯಾದಾಗ ಅದರ ಶಾಖೆಯೊಂದನ್ನು ಮಂಗಳೂರಿನಲ್ಲಿ ಪ್ರಾರಂಭಿಸಲಾಯಿತು. ಎಲ್ಲಾ ಬ್ರಾಹ್ಮಣ ವರ್ಗದವರನ್ನು ಒಳಗೊಂಡ ಈ ಸಂಘಟನೆಯಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿಗಳಾದ ಶ್ರೀ ಕರುಣ್ ರಾವ್ ಬೆಳ್ಳೆಯವರ ಅಪೇಕ್ಷೆಯಂತೆ ನನ್ನನ್ನು ಜೊತೆ ಕಾರ್ಯದರ್ಶಿಯಾಗಿ ನೇಮಕಗೊಳಿಸಲಾಯಿತು.

ಉಡುಪಿ, ಮಂಗಳೂರು, ಪುತ್ತೂರಿನಲ್ಲಿ ಶಿವಳ್ಳಿ, ಕೋಟ, ಹವ್ಯಕ, ಕರಾಡ ಈ ಎಲ್ಲಾ ಸಮಾಜಗಳ ಪುರೋಹಿತರ ಸಂಘಟನೆಯೊಂದನ್ನು ಈಗಾಗಲೇ ಪ್ರಾರಂಭಿಸಿದ್ದಾರೆ.

ನಮ್ಮ ಸಮಾಜಕ್ಕೆ ಗುರುಮಠ, ಅರ್ಚಕರು, ಪುರೋಹಿತರು, ದೇವಸ್ಥಾನದ ಆಡಳಿತ ತಂತ್ರಿಗಳು ಇದ್ದು, ಸಮಾಜಕ್ಕೆ ಶ್ರೇಷ್ಠ ಇತಿಹಾಸವಿರುತ್ತದೆ. ನಮ್ಮ ಸಮಾಜದಲ್ಲಿ ಪೌರೋಹಿತ್ಯ ಪರಂಪರೆಗೆ ರಕ್ತಸಂಬಂಧದ ಮುಂದುವರಿಕೆ ಇದ್ದ ಕಾರಣ ನಮ್ಮ ಸಮಾಜದ ಹಿತದೃಷ್ಟಿಯಿಂದ ಮುಂದಿನ ಪೀಳಿಗೆಯು ವೈದಿಕ ಪರಂಪರೆಯನ್ನು ಮುಂದುವರಿಸುವಂತೆ ಪ್ರೋತ್ಸಾಹಿಸಬೇಕಾಗಿದೆ. ನಮ್ಮ ಸಮಾಜದ ಅರ್ಚಕರು ಮತ್ತು ಪುರೋಹಿತರನ್ನು ನಾವು ಗೌರವಿಸಬೇಕು, ಅವರಿಗೆ ನಾವು ಕೃತಜ್ಞರಾಗಿರಬೇಕು. ಈ ವಿಚಾರದಲ್ಲಿ ಧರ್ಮಚಿಂತಕ ನಮ್ಮ ಶ್ರೀ ಮಠದ ಪ್ರಾಂತೀಯ ಧರ್ಮಾಧಿಕಾರಿಗಳಾದ ಶೃಂಗೇರಿ ವೇದಮೂರ್ತಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ತಂತ್ರಿಗಳನ್ನು ವಿನಂತಿಸಿದಾಗ ಎಲ್ಲರೂ ಸಂಘಟಿತರಾಗಿ ಈ ಬಗ್ಗೆ ಮುಂದುವರಿಯೋಣ ಎಂದು ಸಲಹೆ ನೀಡಿದ್ದಾರೆ. ಇವರ ಜೊತೆಯಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆಯವರ ಮತ್ತು ಬೆಳ್ತಂಗಡಿಯ ನ್ಯಾಯವಾದಿ ಶ್ರೀ ಧನಂಜಯ ರಾವ್ ಬಿ. ಕೆ., ಉಡುಪಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕುಂದಾಪುರದ ಶ್ರೀ ಗಣೇಶ್ ರಾವ್‌ರವರ



ಸಹಕಾರದ ಭರವಸೆಯೊಂದಿಗೆ ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ. ನಮ್ಮ ಸಮಾಜದ ಪುರೋಹಿತರ, ವಿದ್ವಾಂಸರ, ಅರ್ಚಕರ ಬಳಿ ಈ ಬಗ್ಗೆ ಪ್ರಸ್ತಾಪಿಸಿದಾಗ ಅವರು ತಮ್ಮ ಸಮ್ಮತಿ ಸೂಚಿಸಿದ್ದಾರೆ.

ಇದನ್ನು ಕಾರ್ಯಗತಗೊಳಿಸಲು ದಿನಾಂಕ 11-07-2020ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಮಧ್ಯಾಹ್ನ ಗಂಟೆ 2-30ಕ್ಕೆ ಶ್ರೀ ಗುರುಗಳ ಆಶೀರ್ವಾದದೊಂದಿಗೆ ಸಮಾನ ಮನಸ್ಕರ ಸಮ್ಮುಖದಲ್ಲಿ ಗುರು ಪ್ರಾರ್ಥನೆಯೊಂದಿಗೆ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಸೂಚನೆಯಂತೆ "ಶ್ರೀ ಸ್ಥಾನಿಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಪಾಲನಾ ಸಭಾ" ಎಂಬ ಸಂಘವನ್ನು ಆರಂಭಿಸಲಾಯಿತು.

ನಮ್ಮ ಸಮಾಜದ ಎಲ್ಲಾ ಸ್ಥಾನಿಕ ಸಂಘಟನೆಗಳು ನಮಗೆ ಸಹಕಾರ, ಸಲಹೆ-ಸೂಚನೆ, ಸೂಕ್ತ ಮಾರ್ಗದರ್ಶನ ನೀಡಿ ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

**ಬ್ರಹ್ಮಶ್ರೀ ಸುಬ್ರಹ್ಮಣ್ಯ ಭಟ್, ಕೋಟೆಕಾರು, ಅರ್ಚಕರು ಮತ್ತು ಪುರೋಹಿತರು ಹಾಗೂ ಪರಿಕರ್ಮಿಗಳು ಮೊಬೈಲ್ : 6364324335**

## ಸಂಘದ ಪದಾಧಿಕಾರಿಗಳು

ಸಂಘದ ಗೌರವಾಧ್ಯಕ್ಷರು

**ವೇದಮೂರ್ತಿ ಬ್ರಹ್ಮಶ್ರೀ ಘನಪಾಠಿ ಶ್ರೀ ಭವಾನಿಶಂಕರ ಉಪಾಧ್ಯಾಯ, ಉಡುಪಿ**

| | | |
|---|---|---|
| ಶ್ರೀ ಗುರುಪ್ರಸಾದ್ ಹೆಬ್ಬಾರ್, ಕಬ್ಬಿನಾಲೆ | – | ಅಧ್ಯಕ್ಷರು |
| ಶ್ರೀ ಚಿದಾನಂದ ಶ್ಯಾನುಭೋಗ್, ಕಿರಿಮಂಜೇಶ್ವರ | – | ಉಪಾಧ್ಯಕ್ಷರು |
| ಶ್ರೀ ಜಗದಾಭಿರಾಮ, ಪಡುಬಿದ್ರೆ | – | ಉಪಾಧ್ಯಕ್ಷರು |
| ಶ್ರೀ ಸುಬ್ರಹ್ಮಣ್ಯ ಭಟ್, ಕೋಟೆಕಾರು | – | ಪ್ರಧಾನ ಕಾರ್ಯದರ್ಶಿ |
| ಶ್ರೀ ಕೃಷ್ಣರಾಜ ಭಟ್, ಹೆಜಮಾಡಿ | – | ಜೊತೆ ಕಾರ್ಯದರ್ಶಿ |
| ಶ್ರೀ ಪ್ರಶಾಂತ್ ಭಟ್, ಪುತ್ತೂರು | – | ಪ್ರಧಾನ ಸಂಚಾಲಕರು |
| ಶ್ರೀ ಪ್ರತಾಪ್ ಶರ್ಮ, ವಗ್ಗ | – | ಖಜಾಂಚಿ |

ಕಾನೂನು ಸಲಹೆಗಾರರು : ಶ್ರೀ ಧನಂಜಯ ರಾವ್ ಬಿ. ಕೆ., ಬೆಳ್ತಂಗಡಿ

**ತಾಲೂಕು ಸಂಚಾಲಕರು**



| | | |
|---|---|---|
| ಕುಂದಾಪುರ | – | ಶ್ರೀ ರಂಗನಾಥ ಭಟ್, ಸೌಕೂರು |
| ಉಡುಪಿ | – | ಶ್ರೀ ರಾಘವೇಂದ್ರ ಭಟ್, ನಾಗಪಾತ್ರಿಗಳು, ಬಾರ್ಕೂರು |
| ಕಾಪು | – | ಶ್ರೀ ಜಗದೀಶ್ ಉಪಾಧ್ಯಾಯ, ಪಾವಂಜೆ |
| ಕಾರ್ಕಳ | – | ಶ್ರೀ ಸತೀಶ್ ಭಟ್, ಪಲಿಮಾರು |
| ಬೆಳ್ತಂಗಡಿ | – | ಶ್ರೀ ಅಜೇಯ ಭಟ್, ಸುಲ್ಕೇರಿ |
| ಮೂಡಬಿದ್ರೆ | – | ಶ್ರೀ ಹರೀಶ್ ಭಟ್, ಶಿರ್ತಾಡಿ |
| ಸುಳ್ಯ | – | ಶ್ರೀ ಅಖಿಲೇಶ್ ಭಟ್ |
| ಮಂಗಳೂರು | – | ಶ್ರೀ ಸುಬ್ರಹ್ಮಣ್ಯ ಭಟ್, ಪಾವಂಜೆ |
| ಕಡಬ | – | ಶ್ರೀ ಅರುಣ ಭಟ್ |
| ಕಾಸರಗೋಡು | – | ಶ್ರೀ ಪ್ರಸನ್ನ ಶ್ಯಾನುಭೋಗ್ |

ಗೌರವ ಸಲಹೆಗಾರರು

**ವೇದಮೂರ್ತಿ ಬ್ರಹ್ಮಶ್ರೀ ಧರ್ಮಚಿಂತಕರು ತಂತ್ರಿಗಳು ಪ್ರಾಂತೀಯ ಧರ್ಮಾಧಿಕಾರಿಗಳು ವಾಗೀಶ ಶಾಸ್ತ್ರಿ, ಪಾವಂಜೆ**

**ವೇದಮೂರ್ತಿ ಬ್ರಹ್ಮಶ್ರೀ ಪುರೋಹಿತರು ಜಗದೀಶ್ ಭಟ್, ಭಟ್ರಪಾಡಿ, ಪುತ್ತೂರು**


ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ -
**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
**Mobile : 9449903002**

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

**N. LAXMI PRASAD**
ಕಾರ್ಯಕಾರಿಣಿ ಮಂಡಳಿ ಸದಸ್ಯರು

D. K. District Used Vehicle Dealers & Agents Association (R), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾ ಬಂಟ್ವಾಳ ವಲಯ (ರಿ.), ವಿಟ್ಲ ಮತ್ತು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ, ಬಂಟ್ವಾಳ

ದಿನಾಂಕ 11-07-2020ನೇ ಶನಿವಾರ ಮೆಲ್ಕಾರ್‌ನಲ್ಲಿರುವ ಆರ್. ಕೆ. ಎಂಟರ್‌ಪ್ರೈಸಸ್‌ನಲ್ಲಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾ, ಬಂಟ್ವಾಳ ಇದರ ಕಾರ್ಯಕಾರಿ ಸಭೆ ಮತ್ತು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ, ಬಂಟ್ವಾಳ ಇದರ ಧರ್ಮದರ್ಶಿಗಳ ಪ್ರಥಮ ಸಭೆಯು ನಡೆಯಿತು.

ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೃಷ್ಣ ಶರ್ಮ ಅನಾರು ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ದೇವರಾವ್ ಬೊಕ್ಕಸ ಹಾಗೂ ಕಾರ್ಯದರ್ಶಿ ಶ್ರೀ ಸಂತೋಷ್ ಕುಮಾರ್ ಬಿ. ಸಿ. ರೋಡ್ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೋವಿಡೋತ್ತರ ಪ್ರಥಮ ಸಭೆಯನ್ನು ಸಾಮಾಜಿಕ ಅಂತರದೊಂದಿಗೆ ನಡೆಸಲಾಯಿತು. ಅನೇಕ ವಿಷಯಗಳು ಚರ್ಚೆಗೊಂಡವು. ಕೋವಿಡ್ ಮಹಾಮಾರಿಯು ಪ್ರಪಂಚವನ್ನು ಕಾಡುತ್ತಿರುವುದರಿಂದ ಸಮಾಜದ ಸುರಕ್ಷತೆಗಾಗಿ ಈ ವರ್ಷದ ಮಹಾಸಭೆಯನ್ನು ಮುಂದೂಡಿ, ಮುಂದಿನ ವರ್ಷ ನಡೆಸುವುದಾಗಿ ನಿರ್ಣಯಿಸಲಾಯಿತು.

ವಿದ್ಯಾರ್ಥಿವೇತನ ನೀಡುವ ಬಗ್ಗೆ ಚರ್ಚೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಪರೀಕ್ಷಾ ಫಲಿತಾಂಶಗಳು ಬಂದ ಬಳಿಕ ವಲಯ ಪ್ರಮುಖರು ವಿದ್ಯಾರ್ಥಿವೇತನ ಬಯಸುವವರ ಅರ್ಜಿಯನ್ನು ಪಡೆದು ವಿದ್ಯಾರ್ಥಿವೇತನ ಸಮಿತಿಗೆ ಸಲ್ಲಿಸುವಂತೆ ನಿರ್ಣಯಿಸಲಾಯಿತು.

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.), ಮಂಗಳೂರು ಇದರ ಬಂಟ್ವಾಳ ಮತ್ತು ವಿಟ್ಲ ಶಾಖೆಗಳ ಸಲಹಾ ಸಮಿತಿಯ ಬಗ್ಗೆ, ಶೃಂಗೇರಿ ಜಗದ್ಗುರುಗಳ ಚಾತುರ್ಮಾಸ್ಯ ಪ್ರವಾಸದ ಬಗ್ಗೆ ಹಾಗೂ ಇನ್ನಿತರ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಿ, ಸಲಹೆ-ಸೂಚನೆಗಳನ್ನು ಪಡೆದು ನಿರ್ಣಯಿಸಲಾಯಿತು. ಸಂಘದ ಪರವಾಗಿ ಶ್ರೀ ನಾಗೇಶ ರಾವ್, ಆಡಳಿತ ನಿರ್ದೇಶಕರು ಸಲಹೆ-ಸೂಚನೆಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಸಂತೋಷ್ ಕುಮಾರ್ ಬಿ. ಸಿ. ರೋಡ್ ಪ್ರಾಸ್ತಾವಿಕವಾಗಿ ಮಾತನಾಡಿ ವಿಷಯವನ್ನು ಮಂಡಿಸಿದರು. ಖಜಾಂಚಿ ಶ್ರೀ ನಿತಿನ್ ಕುಮಾರ್ ಕಲ್ಲಡ್ಕ ಇವರು ಹಣಕಾಸಿನ ವರದಿಯನ್ನು ಮಂಡಿಸಿದರು.

ಅನಂತರ ನಡೆದ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ, ಬಂಟ್ವಾಳ ಇದರ ಪ್ರಥಮ ಸಭೆಯಲ್ಲಿ ಗೌರವಾಧ್ಯಕ್ಷರಾದ ಶ್ರೀ ಕೃಷ್ಣ ಶರ್ಮ ಅನಾರು, ಅಧ್ಯಕ್ಷರಾದ ಶ್ರೀ ಭವಾನಿಶಂಕರ ರಾವ್ ಬಿ. ಸಿ. ರೋಡ್, ಸಹ ಕಾರ್ಯದರ್ಶಿ ಯವರಾದ ಶ್ರೀ ಸತೀಶ್ ರಾವ್ ಪೆರ್ನೆ, ಖಜಾಂಚಿ ಶ್ರೀ ಹರೀಶ್ ಕುಮಾರ್ ವಿ. ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಪ್ರತಿಷ್ಠಾನಕ್ಕೆ ಸಂಬಂಧಪಟ್ಟ ಮುದ್ರೆಗಳು, ಲೋಗೋ ಮತ್ತು ಕಡತ ಸಂಬಂಧಿ ಪತ್ರಗಳ ಮುದ್ರಣಕ್ಕೆ ಹಾಗೂ ಬ್ಯಾಂಕ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಭೆಯ ಅನುವು ಪಡೆಯಲಾಯಿತು.

ಸಭಾಕ್ಕೆ ಕಾವಳಕಟ್ಟೆಯಲ್ಲಿ ದಾನಿಗಳು ನೀಡಿದ್ದ ಜಾಗದ ಜವಾಬ್ದಾರಿಯನ್ನು ಪ್ರತಿಷ್ಠಾನಕ್ಕೆ ಸಭಾದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಮೂಲಕ ಪ್ರತಿಷ್ಠಾನದ ಅಧ್ಯಕ್ಷರಿಗೆ ಹಸ್ತಾಂತರಿಸಲಾಯಿತು ಹಾಗೂ ಸಭೆಯು ಇದನ್ನು ಅಂಗೀಕರಿಸಿತು.

ಪ್ರತಿಷ್ಠಾನವು ಮುಂದೆ ಕಟ್ಟಡ ನಿರ್ಮಾಣಕ್ಕೆ ಬೇಕಾದ ಯೋಜನೆಯನ್ನು, ರೂಪುರೇಷೆಯನ್ನು ಹಾಕುವ ಬಗ್ಗೆ ಮತ್ತು ಉಪಸಮಿತಿಗಳನ್ನು ರಚಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಕಾವಳಕಟ್ಟೆಯಲ್ಲಿ ಪ್ರತಿಷ್ಠಾನಕ್ಕೆ ನೀಡಿರುವ ನಿವೇಶನವನ್ನು ವೀಕ್ಷಿಸುವರೇ ದಿನಾಂಕ 31-07-2020ರಂದು ಬೆಳಗ್ಗೆ ಹತ್ತು ಗಂಟೆಗೆ ಪ್ರತಿಷ್ಠಾನದ ಧರ್ಮದರ್ಶಿಗಳು ಭೇಟಿ ನೀಡುವುದೆಂದು ನಿರ್ಧರಿಸಲಾಯಿತು.

ಮುಂದೆ ಸಭಾ ಮತ್ತು ಪ್ರತಿಷ್ಠಾನ ಸಭೆ ಸೇರುವುದರ ಬಗ್ಗೆ, ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆ ಚರ್ಚಿಸಲಾಯಿತು.

ಶ್ರೀ ನಿತಿನ್ ಕುಮಾರ್ ಕಲ್ಲಡ್ಕ ಅವರು ನೆರೆದಿರುವವರನ್ನು ವಂದಿಸಿದರು. ಕಾರ್ಯಕ್ರಮವನ್ನು ಉಪಾಹಾರದೊಂದಿಗೆ ಮುಕ್ತಾಯಗೊಳಿಸಲಾಯಿತು.

**ಶ್ರೀ ಕೃಷ್ಣ ಶರ್ಮ ಅನಾರು**
ಅಧ್ಯಕ್ಷರು (ಸಭಾ) ಹಾಗೂ ಗೌರವಾಧ್ಯಕ್ಷರು (ಪ್ರತಿಷ್ಠಾನ)

**ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.)**
ಬಂಟ್ವಾಳ ವಲಯ, ವಿಟ್ಲ

## ವಾರ್ಷಿಕೋತ್ಸವ ಆಚರಣೆ




ಶ್ರೀ ಶಾರದಾಂಬಾ ಭಜನಾ ಮಂಡಳಿಯು ಶ್ರೀ ಸುಬ್ರಹ್ಮಣ್ಯ ಸದನದಲ್ಲಿ ಯಶಸ್ವಿಯಾಗಿ ಒಂದು ವರುಷಗಳ ಕಾಲ ಭಜನಾ ತರಬೇತಿಯನ್ನು ಪಡೆದು, ಹಲವಾರು ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿದ್ದು ವಾರ್ಷಿಕೋತ್ಸವವನ್ನು Whatsapp ಮೂಲಕ ವಿಶಿಷ್ಟ ರೀತಿಯಲ್ಲಿ ಆಚರಿಸಿಕೊಂಡಿತು.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಮಲೆಮಾರಿನ ಶ್ರೀ ಭವಾನಿಶಂಕರ್ ರಾವ್‌ರವರ ಪುತ್ರ **ಶ್ರೀ ಗಣೇಶ್ ರಾವ್** (51) ತಾ. 31-07-2020ನೇ ಶುಕ್ರವಾರ ಮಣಿಪಾಲದ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಇವರು ತಂದೆ, ಸಹೋದರರು, ಸಹೋದರಿ, ಪತ್ನಿ, ಮಗ, ಮಗಳು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.


***



**ಕುಡುಪು ರಾಜೇಂದ್ರಪ್ರಸಾದ** (74) ತಾ. 11-07-2020ನೇ ಶನಿವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಇಬ್ಬರು ಮಗಳಂದಿರು, ಅಳಿಯಂದಿರು, ಮೊಮ್ಮಗ ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ. ಇವರು ಖಾಸಗಿ ಸಂಸ್ಥೆಯಲ್ಲಿ ಸೇವೆಸಲ್ಲಿಸಿ ನಿವೃತ್ತರಾಗಿದ್ದರು.

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ವಗ್ಗ
: 9448043969
8861497325
ಶಿವಗಿರಿ ಎಂಟರ್‌ಪ್ರೈಸಸ್
SHIVAGIRI ENTERPRISES

# ಉಪಾಕರ್ಮ (ಒಂದು ಶಾಸ್ತ್ರೀಯ ಚಿಂತನೆ)

ಉಪನಯನ ಸಂಸ್ಕಾರದ ಅನಂತರದಲ್ಲಿ ಉಪಾಕರ್ಮ ಒಂದು ಸಂಸ್ಕಾರ. ಹೇಗೆ ಉಪನಯನವು ಗಾಯತ್ರಿ ಮಂತ್ರೋಪದೇಶ ಪಡೆಯುವುದರ ಮೂಲಕ ಜೀವಸಂಸ್ಕಾರವೋ ಹಾಗೆಯೇ ಉಪಾಕರ್ಮವು ವೇದಗ್ರಹಣದ್ವಾರಾ ಆತ್ಮಸಂಸ್ಕಾರ. ಇಲ್ಲಿಂದಲೇ ವೇದಾಧ್ಯಯನಾರಂಭ.

ನಿತ್ಯನೈಮಿತ್ತಿಕ ಕರ್ಮಗಳಿಗೆ ಪಾಪಕ್ಷಯವೇ ಫಲ. ಅದೇ ಚಿತ್ತಶುದ್ಧಿ. ಚಿತ್ತಶುದ್ಧಿಯ ಮೂಲಕವಾಗಿ ತತ್ತ್ವಜ್ಞಾನವನ್ನು ಹೊಂದಲು ಅರ್ಹತೆಯನ್ನು ಹೊಂದುವುದರಿಂದಲೇ ನಿತ್ಯನೈಮಿತ್ತಿಕ ಕರ್ಮಗಳಿಗೆ ಮೋಕ್ಷ ಹೊಂದಲು ಪರಂಪರೆಯ ಕಾರಣತ್ವ ಇದೆ ಎಂಬುದು ವೈದಿಕ ಸಿದ್ಧಾಂತ. ಎಲ್ಲಾ ರೀತಿಯ ನಿತ್ಯಾದಿಕರ್ಮಾನುಷ್ಠಾನಕ್ಕೆ ಸಾಧನವಾದ ವೇದಾಧ್ಯಯನದ ಆರಂಭ ಮಾಡುವ ಈ ಉಪಾಕರ್ಮವು ಸಂಸ್ಕಾರವೆನಿಸುತ್ತದೆ. ಅಂದರೆ ಗುಣಾಧಾನ (ವಿಶೇಷ ಫಲವನ್ನು ಒದಗಿಸುವುದು) ಉಂಟು ಮಾಡುವುದರೊಂದಿಗೆ ಸಂಸ್ಕಾರವೆಂದು ಕರೆಸಿಕೊಳ್ಳುತ್ತದೆ. ಹದಿನಾರು ಸಂಸ್ಕಾರಗಳು ಎಂಬ ವಿಭಾಗದಲ್ಲಿ ಇದಕ್ಕೆ ಪ್ರತ್ಯೇಕ ಗಣನೆ ಇಲ್ಲ. 18 ಸಂಸ್ಕಾರಗಳು ಎಂಬ ಪಕ್ಷದಲ್ಲಿ ಉಪಾಕರ್ಮ ಹಾಗೂ ಉತ್ಸರ್ಜನ ಸೇರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶ ಎಂದರೆ ನೂತನ ಉಪಾಕರ್ಮ ಸಂಸ್ಕಾರಕರ್ಮ. ಉಳಿದ ಚೌಲೋಪನಯನಾದಿಗಳಂತೆ ಇಲ್ಲಿ ನಾಂದೀ ಶ್ರಾದ್ಧವನ್ನು ವಿಧಾನ ಮಾಡಿದ್ದಾರೆ. **“ವೇದಗ್ರಹಣ ಅಧಿಕಾರ ಸಿದ್ಧ್ಯರ್ಥಂ”** ಎಂಬುದಾಗಿಯೇ ಇಲ್ಲಿ ಸಂಕಲ್ಪವನ್ನು ಉಲ್ಲೇಖಿಸಲಾಗಿದೆ. ಅನಂತರದ ದ್ವಿತೀಯಾದಿ ಉಪಾಕರ್ಮಗಳು ನಿತ್ಯಕರ್ಮ. ದ್ವಿತೀಯಾದಿ ಉಪಾಕರ್ಮಗಳೆಲ್ಲ ಉತ್ಸರ್ಜನಪೂರ್ವಕವಾಗಿಯೇ ವಿಹಿತವಾಗಿವೆ. ಉಪಾಕರ್ಮ ಹಾಗೂ ಉತ್ಸರ್ಜನಗಳು ಗೃಹ್ಯಸೂತ್ರಕಾರರೇ ತಿಳಿಸಿದ ವೈದಿಕಕರ್ಮ. ಇವುಗಳನ್ನು ಮಾಡದಿದ್ದರೆ ದೋಷವನ್ನು ಶಾಸ್ತ್ರವು ತಿಳಿಸುತ್ತಿರುವುದರಿಂದ ಇದು ನಿತ್ಯಕರ್ಮ.

ಉಪಾಕರ್ಮ ಹಾಗೂ ಉತ್ಸರ್ಜನಗಳು ವೇದಸಂಸ್ಕಾರ. ತನ್ಮೂಲಕವಾಗಿ ವೇದಾಧ್ಯಯನಶೀಲರಿಗೂ ಫಲಜನಕ. ಉಪಾಕರ್ಮ ಅಥವಾ ಉಪಾಕರಣ ಎಂದರೆ ಸ್ವೀಕರಿಸುವುದು. ಉತ್ಸರ್ಜನ ಎಂದರೆ ಪರಿತ್ಯಾಗ ಅಥವಾ ಬಿಡುವುದು ಎಂಬುದು ಸಾಮಾನ್ಯ ಶಬ್ದಾರ್ಥ. ಆದರೆ ಇಲ್ಲಿ ವೇದಾಧ್ಯಯನ ಹಾಗೂ ನಿಯತ ವೇದಾಧ್ಯಯನ ವ್ಯವಸ್ಥೆಯ ನಿಮಿತ್ತವಾಗಿ ವಿಹಿತವಾದ ಒಂದು ವೈದಿಕಕರ್ಮ ಎಂಬುದು ಪಾರಿಭಾಷಿಕ ಅರ್ಥ. ಇದನ್ನೇ ಯಾಜ್ಞವಲ್ಕ್ಯ ಮಹರ್ಷಿಗಳು **“ಸ್ವಾಧ್ಯಾಯ ಸಂಸ್ಕಾರಕಂ ಉಪಾಕರ್ಮಾಖ್ಯಂ ಕರ್ಮ”** ಎಂದಿದ್ದಾರೆ. ಸ್ವಾಧ್ಯಾಯ – ಸ್ವಶಾಖೀಯ ವೇದ. ಅದರ ಸಂಸ್ಕಾರವೇ ಉಪಾಕರ್ಮವೆಂಬ ವೈದಿಕ ಕಾರ್ಯಕಲಾಪ. ಇದನ್ನು ಬೋಧಾಯನಾಚಾರ್ಯರು – “ಹುತ” ಎಂಬ ಪಾಕಯಜ್ಞಗಳ ಸಮುದಾಯದಲ್ಲಿ ಸೇರಿಸಿದ್ದಾರೆ. ಹುತಾನುನುಕೃತಿರುಪಾಕರ್ಮ (ಬೋ.ಗೃ.ಸೂ. 3–1–1) ಎಂಬ ಸೂತ್ರದಲ್ಲಿ ತಿಳಿಸಿದ್ದಾರೆ. ಅಂದರೆ ಇಲ್ಲಿ ಹೋಮವೇ ಪ್ರಧಾನ ಋಷಿಪೂಜೆ ತರ್ಪಣಾದಿಗಳೆಲ್ಲ ಅಂಗಭೂತವಾದವುಗಳು.

ಉಪಾಕರ್ಮದ ಕಾಲವನ್ನು ಬೋಧಾಯನಾಚಾರ್ಯರು **“ಶ್ರಾವಣ್ಯಾಂ ಪೌರ್ಣಮಾಸ್ಯಾಂ ಕ್ರಿಯೇತ ಅಪಿವಾ ಆಷಾಢ್ಯಾಂ”** (ಬೋ.ಗೃ.ಸೂ 3–1–2) ಶ್ರಾವಣ ಪೂರ್ಣಿಮೆ ಕೃಷ್ಣಯಜುರ್ವೇದದ ಬೋಧಾಯನ ಸೂತ್ರಾನುಯಾಯಿಗಳಿಗೆ ಮುಖ್ಯ ಕಾಲ. ಆಗ ಏನಾದರೂ ತೊಡಕಿದ್ದರೆ ಆಷಾಢ ಪೂರ್ಣಿಮೆಯನ್ನು ಪ್ರತಿನಿಧಿ ಕಾಲವಾಗಿ ತಿಳಿಸಿದ್ದಾರೆ. ಸಾಮಾನ್ಯವಾಗಿ ಶ್ರಾವಣ ಪೂರ್ಣಿಮೆ ಉಪಾಕರ್ಮದ ಪ್ರಧಾನ ಕಾಲವೆಂದಾದರೂ ಕೆಲವು ಗೃಹ್ಯಸೂತ್ರಕಾರರು ಅಲ್ಲಿಯೇ ಸ್ವಲ್ಪ ಪರಿವರ್ತನೆಯನ್ನು ತಿಳಿಸಿದ್ದಾರೆ. ಆಶ್ವಲಾಯನಾಚಾರ್ಯರು ಶ್ರಾವಣ ಮಾಸದ ಶ್ರವಣನಕ್ಷತ್ರವಿರುವ ದಿನ, ಶ್ರಾವಣ ಶುಕ್ಲ ಪಂಚಮೀ, ಹಸ್ತಾನಕ್ಷತ್ರವಿರುವ ದಿನ ಎಂಬುದಾಗಿ ಹೀಗೆ ಉಪಾಕರ್ಮದ ಕಾಲವನ್ನು **“ಓಷಧೀನಾಂ ಪ್ರಾದುರ್ಭಾವೇ ಶ್ರವಣೇನ ಶ್ರಾವಣಸ್ಯ । ಪಂಚಮ್ಯಾಂ ಹಸ್ತೇನ ವಾ ॥”** (ಆ.ಗೃ.ಸೂ. 3.5 / 2 / 3) ಎಂಬ ಸೂತ್ರದಲ್ಲಿ ತಿಳಿಸಿದ್ದಾರೆ.

ಒಟ್ಟಿನಲ್ಲಿ “ಉಪಾಕರ್ಮ” ಎಂಬುದು ನಿರಂತರ ವೇದಾಧ್ಯಯನದ ವ್ಯವಸ್ಥೆಯ ಆರಂಭ. ಆಗ ಋಷಿಗಳಿಗೆ ಪೂಜೆ, ತರ್ಪಣ, ಹೋಮಾದಿಗಳನ್ನು ನಡೆಸಿ ಹೊಸತಾದ ಯಜ್ಞೋಪವೀತವನ್ನು ಧರಿಸಿ ಅವರವರ ಗೃಹ್ಯಸೂತ್ರೋಕ್ತ ಪ್ರಕಾರವಾಗಿ ಉಪಾಕರ್ಮ ಮಾಡಿ ವೇದಾಧ್ಯಯನದ ಆರಂಭ. ಬ್ರಹ್ಮಚಾರಿಗಳು ಅಲ್ಲಿಂದ ಮುಂದೆ ಅನಧ್ಯಾಯಾದಿಗಳನ್ನು ಹೊರತುಪಡಿಸಿ, ನಿರಂತರವಾಗಿ ವೇದಾಧ್ಯಯನವನ್ನು ನಡೆಸಬೇಕು. ಅದು ಮುಂದೆ ನಾಲ್ಕೂವರೆ ತಿಂಗಳು, ಐದೂವರೆ ತಿಂಗಳು ಹೀಗೆ ಬೇರೆ–ಬೇರೆ ಶಾಖೆಯವರು ಕಾಲಭೇದವನ್ನು ತಿಳಿಸಿದ್ದಾರೆ.

ಮುಂದೆ ಪುಷ್ಯ ಶುಕ್ಲಪಕ್ಷ ಪೂರ್ಣಿಮೆ ಅಥವಾ ಅಲ್ಲಿ ಬಾಧಕವಿದ್ದಾಗ ಮಾಘಶುಕ್ಲದ ಪೂರ್ಣಿಮೆಯಲ್ಲಿ ಉತ್ಸರ್ಜನೆಯನ್ನು ಮಾಡಬೇಕು. ಅದನ್ನು **“ಅರ್ಧಪಂಚಮಾನ್ಮಾಸಾನ್ ಅಧೀತ್ಯ ಉತ್ಸೃಜತಿ ಪಂಚಾರ್ಧಷಷ್ಠಾನ್ವಾ”** ಎಂಬುದಾಗಿ ಕಾಲಭೇದವನ್ನು ತಿಳಿಸಿದ್ದಾರೆ.

ಬೋಧಾಯನಾಚಾರ್ಯರು **“ಪೌಷ್ಯಾಂ ಪೌರ್ಣಮ್ಯಾಸಾಂ ಕ್ರಿಯೇತ ಅಪಿವಾ ಮಾಘ್ಯಾಂ”** ಎಂಬುದಾಗಿ ಪುಷ್ಯಶುಕ್ಲ ಪೂರ್ಣಿಮೆ ಅಥವಾ ಮಾಘಶುಕ್ಲಪೂರ್ಣಿಮೆಯಲ್ಲಿ ಉತ್ಸರ್ಜನವನ್ನು ಮಾಡಿಕೊಳ್ಳಬೇಕು ಎಂದಿದ್ದಾರೆ.

“ಉತ್ಸರ್ಜನ” ಎಂಬುದೂ ಒಂದು ವೈದಿಕವಾದ ಕರ್ಮ. ಬೋಧಾಯನರಲ್ಲಿ ಪಾಕಯಜ್ಞ ಸಮುದಾಯದಲ್ಲೊಂದಾದ “ಬಲಿಹರಣ” ಎಂಬ ಯಜ್ಞದ ವಿಕೃತಿ. ಇಲ್ಲಿ ಹೋಮವಿಲ್ಲ. ಋಷಿ–ದೇವತೆ–ಪಿತೃಗಳ ಪೂಜೆ ತರ್ಪಣ ಹಾಗೂ ಅನ್ನದಿಂದ ಬಲಿಹರಣ. ಅವುಗಳಲ್ಲಿ ಬಲಿಹರಣ ಮುಖ್ಯ ಉಳಿದವು ಅಂಗಗಳು. ಆಶ್ವಲಾಯನಾದಿ ಕೆಲವು ಶಾಖೆಗಳಲ್ಲಿ ಹೋಮವೂ ಇದೆ. ಅಲ್ಲಿ ಹೋಮವೇ ಪ್ರಧಾನ. ಉತ್ಸರ್ಜನವನ್ನು **“ನಿರಂತರ ವೇದಾಧ್ಯಯನ ತ್ಯಾನಾರ್ಥಂ ಕರ್ಮ”** ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ಉತ್ಸರ್ಜನೆ ಎಂಬುದು ಅಧ್ಯಯನ ಮಾಡಿದ ವೇದಭಾಗದ ಪರಿತ್ಯಾಗ ಎಂಬ ಅರ್ಥವಲ್ಲ. ವೇದಾಧ್ಯಯನದ ಬಗ್ಗೆ ಮೊದಲು ಮಾಡಿಕೊಂಡ ವ್ಯವಸ್ಥೆಯ ಬದಲಾವಣೆ. ಉತ್ಸರ್ಜನ ಎಂಬ ವೈದಿಕಕರ್ಮವನ್ನು ಅವರವರ ಸೂತ್ರಗಳಲ್ಲಿ ತಿಳಿಸಿದ ರೀತಿಯಲ್ಲಿ ಅನುಷ್ಠಾನ ಮಾಡಿ ಮುಂದಿನ ಅಧ್ಯಯನ ವ್ಯವಸ್ಥೆಯನ್ನು ಆರಂಭಿಸಬೇಕು.

ಒಟ್ಟಿನಲ್ಲಿ ಸಾಮಾನ್ಯವಾಗಿ ಹೇಳುವುದಾದರೆ ಉಪಾಕರ್ಮದ ನಂತರ (ಶ್ರಾವಣ ಪೂರ್ಣಿಮೆ) ಆರು ತಿಂಗಳು (ಕೆಲವು ಶಾಖೆಗಳಲ್ಲಿ ನಾಲ್ಕೂವರೆ ತಿಂಗಳು) ಮೂಲವೇದದ ಅಧ್ಯಯನ, ಇದು ಮೊದಲ ಭಾಗದ ವ್ಯವಸ್ಥೆ. ಅನಂತರ ಉತ್ಸರ್ಜನ ಎಂಬ ವೈದಿಕ ಕರ್ಮವನ್ನು ಮಾಡಿಕೊಂಡು ಮುಂದಿನ ಆರು ತಿಂಗಳು (ಪುಷ್ಯ / ಮಾಘ ಪೂರ್ಣಿಮೆ ಅನಂತರ) ಶುಕ್ಲಪಕ್ಷದಲ್ಲಿ ಮೂಲವೇದದ ಅಧ್ಯಯನ, ಕೃಷ್ಣಪಕ್ಷದಲ್ಲಿ ವೇದಾಂಗಗಳ (ಶಿಕ್ಷಾ – ವ್ಯಾಕರಣ – ಛಂದಸ್ಸು – ನಿರುಕ್ತ – ಕಲ್ಪ – ಜ್ಯೋತಿಷ ಇವು ವೇದದ ಆರು ಅಂಗಗಳು) ಅಧ್ಯಯನ, ಇದು ಪ್ರಾಚೀನ ಅಧ್ಯಯನ ವ್ಯವಸ್ಥೆ.

ಉತ್ಸರ್ಜನೆಯನ್ನು ವಿಹಿತಕಾಲದಲ್ಲಿ ಮಾಡಲಾಗಿದ್ದಿದ್ದರೆ ಈ ವೈದಿಕಕರ್ಮವನ್ನು **“ಉಪಾಕರ್ಮದಿನೇಽಪಿವಾ”** ಎಂಬುದಾಗಿ ಉಪಾಕರಣದ ದಿನವೇ ಮಾಡಬಹುದು ಎಂಬುದು ಸ್ಮೃತಿವಚನ. ಹಾಗಾಗಿ ನಮ್ಮಲ್ಲಿ ಉಪಾಕರ್ಮದ ದಿನವೇ ಮೊದಲು ಉತ್ಸರ್ಜನ ಮಾಡಿಕೊಂಡು ಸ್ನಾನಮಾಡಿ ಉಪಾಕರ್ಮ ಮಾಡಿಕೊಳ್ಳುವ ರೂಢಿ ಶಿಷ್ಟಸಂಪ್ರದಾಯದಲ್ಲಿ ಬಂದಿದೆ. ಉತ್ಸರ್ಜನೆಯ ಅನಂತರ **“ಸ್ನಾನಂ ವಾ ಪುಣ್ಯಾಹಜಲಪ್ರೋಕ್ಷಣಂ ವಾ ಕೃತ್ವಾ”** ಎಂಬುದಾಗಿ ಸ್ನಾನಕ್ಕೆ ನದಿ ಇತ್ಯಾದಿ ವ್ಯವಸ್ಥೆ ಇಲ್ಲದಾಗ (ಆಪತ್ಪಕ್ಷದಲ್ಲಿ) ಪುಣ್ಯಾಹ ಮಾಡಿದ ಜಲಪ್ರೋಕ್ಷಣೆಯನ್ನು ಸ್ನಾನದ ಬದಲಾಗಿ ಪ್ರಯೋಗಕಾರರು ತಿಳಿಸಿದ್ದಾರೆ.

ಆಗ ಉತ್ಸರ್ಜನೆಯನ್ನು ಪ್ರಾತಃಕಾಲದಲ್ಲೂ ಉಪಾಕರ್ಮವನ್ನು ಅಪರಾಹ್ನದಲ್ಲೂ ಮಾಡಬೇಕೆಂಬುದು ಶಾಸ್ತ್ರಸೂಚಿತ ಕಾಲ.

ಉಪಾಕರ್ಮ ಹಾಗೂ ಉತ್ಸರ್ಜನಗಳು ವೇದಸಂಸ್ಕಾರ ಹಾಗೂ ಆ ಮೂಲಕವಾಗಿ ವೇದಾಧ್ಯಯನ ಮಾಡುವ ಬ್ರಹ್ಮಯಜ್ಞ, ಸ್ವಾಧ್ಯಾಯ ಪಾರಾಯಣಾದಿಗಳನ್ನು ನಡೆಸುವ ಕರ್ತೃಸಂಸ್ಕಾರವೆಂಬುದನ್ನು ಸ್ಮೃತಿಕಾರರು ಸೂಕ್ಷ್ಮವಾಗಿ ತಿಳಿಸಿದ್ದಾರೆ. **“ಯಾತಯಾಮತಾದೋಷ”**ದ ನಿವಾರಣೆಯೇ ಇವೆರಡರ ಪ್ರಧಾನ ಫಲ. ಇದನ್ನೇ ಕಾತ್ಯಾಯನ ಸ್ಮೃತಿಯಲ್ಲಿ – **“ಅಸ್ಥಾನೋಚ್ಛ್ವಾಸವಿಚ್ಛೇದ ಘೋಷಣಾಧ್ಯಾಪನಾದಿಕವ್। ಪ್ರಾಮಾದಿಕಂ ಶ್ರುತೌ ಯತ್ಸ್ಯಾದ್ಯಾತಯಾಮತ್ವಕಾರಿ ತತ್॥”** ಎಂದಿದ್ದಾರೆ ಅಂದರೆ ನಾವು ವೇದಾಧ್ಯಯನ ಮಾಡುವಾಗ ಅಥವಾ ಬ್ರಹ್ಮಯಜ್ಞ ಪಾರಾಯಣಾದಿಗಳಲ್ಲಿ ಶ್ವಾಸೋಚ್ಛ್ವಾಸ ವ್ಯತ್ಯಾಸಗಳಿಂದ ತಿಳಿದೋ ತಿಳಿಯದೆಯೋ ಎಲ್ಲಿ ಪದಚ್ಛೇದ ಮಾಡಬಾರದೋ ಅಲ್ಲಿ ಪದಚ್ಛೇದ ಮಾಡುವ ಸಂದರ್ಭ ಮನುಷ್ಯ ಸಹಜವಾದ ದೋಷದಿಂದ ಉಂಟಾಗಬಹುದು ಅಥವಾ ಉಚ್ಚಾರಣೆಯ ಕಾಲದಲ್ಲಿ ಮಹಾಪ್ರಾಣ ಅಲ್ಪಪ್ರಾಣಾದಿ ದೋಷಗಳು ಅಥವಾ ಉದಾತ್ತಾನುದಾತ್ತಾದಿ ದೋಷಗಳು ಅಥವಾ ಹ್ರಸ್ವ ದೀರ್ಘದ ವ್ಯತ್ಯಾಸಗಳಾದಲ್ಲಿ ಅನುಪೂರ್ವಿ ವ್ಯತ್ಯಾಸವಾಗುತ್ತದೆ. ಇದರಿಂದ ನಿರ್ದಿಷ್ಟವಾದ ಅರ್ಥಬೋಧ ಆಗಲಾರದು ಅಥವಾ ವಿರುದ್ಧಾರ್ಥವನ್ನೇ ಆ ಪದ ತಿಳಿಸಬಹುದು ಅಥವಾ ಬೇರೆಯಾದ ಅರ್ಥಬೋಧವೇ ಆಗಬಹುದು. ಅಪೌರುಷೇಯವಾದ ವೇದದಲ್ಲಿ ವಾಕ್ಯಗಳ ಅನುಪೂರ್ವಿ ನಿತ್ಯತ್ವವನ್ನು ಅಂಗೀಕರಿಸಿದ್ದಾರೆ. ವೇದಗಳಿಗೆ ದೃಷ್ಟವಾದ ಅರ್ಥಜ್ಞಾನವೇ ಮುಖ್ಯವಾದ ಪ್ರಯೋಜನ. ಅದು ಬಾಧಿತವಾಗುತ್ತದೆ. ಆ ದೋಷ ಪರಿಹಾರಕ್ಕಾಗಿ “ಉಪಾಕರ್ಮ” ಹಾಗೂ “ಉತ್ಸರ್ಜನ”ಗಳೆಂಬ ವೈದಿಕಕರ್ಮಗಳು ವಿಹಿತವಾಗಿವೆ.

ಇದೇ ಅರ್ಥದಲ್ಲಿಯೇ ಬೋಧಾಯನರು ದ್ವಿತೀಯಾದಿ ಉಪಾಕರ್ಮದಲ್ಲಿ **“ಅಧ್ಯೇಷ್ಯಮಾಣಾನಾಂ”** (ಮುಂದೆ ಅಧ್ಯಯನ ಮಾಡುವ) **“ಛಂದಸಾಂ ಸವೀರ್ಯತ್ವಾಯ ಉಪಾಕರ್ಮಾಖ್ಯಂ ಕರ್ಮ ಕರಿಷ್ಯೇ”** ಎಂದು ಸಂಕಲ್ಪ ಮಾಡುತ್ತೇವೆ. ಅಪಸ್ತಂಬರಲ್ಲಿ **ಅಧ್ಯೇಷ್ಯಮಾಣಾನಾಂ ಛಂದಸಾಂ ಯಾತಯಾಮಾತಾ ನಿರಾಸದ್ವಾರಾ ಅಪ್ಯಾಯನಾರ್ಥಂ** ಎಂಬುದಾಗಿ ಸಂಕಲ್ಪದಲ್ಲಿ ಉಲ್ಲೇಖಿಸುತ್ತಾರೆ. ಹಾಗೆಯೇ ಉತ್ಸರ್ಜನದಲ್ಲೂ ಸಹ **“ಅಧೀತಾನಾಂ”** (ಹಿಂದೆ ಅಧ್ಯಯನ ಮಾಡಿದ) **ಛಂದಸಾಂ ಸವೀರ್ಯತ್ವಾಯ – ಉತ್ಸರ್ಜನಂ ಕರಿಷ್ಯೇ** ಎಂಬ ಸಂಕಲ್ಪಿಸುತ್ತೇವೆ. **ಸವೀರ್ಯತ್ವಾಯ** ಎಂಬುದು **ಯಾತಯಾಮಾತಾ** ದೋಷ ನಿವೃತ್ತಿಪೂರ್ವಕ ಶಕ್ತಿಶಾಲಿಯಾಗಲು ಎಂಬರ್ಥದಲ್ಲಿದೆ.

ಬ್ರಹ್ಮಚಾರಿಗಳಲ್ಲಿ ಗ್ರಹಣಾಧ್ಯಯನದ ಕಾಲದಲ್ಲಾದ ದೋಷಗಳು ಹಾಗೂ ಗೃಹಸ್ಥ, ವಾನಪ್ರಸ್ಥರಲ್ಲಿ ಬ್ರಹ್ಮಯಜ್ಞ ಸ್ವಾಧ್ಯಾಯ ಪಾರಾಯಣ ಕಾಲದಲ್ಲಾದ ದೋಷಗಳ ಪರಿಹಾರಕ್ಕೆ ಉಪಾಕರ್ಮದ ವಿಧಾನ. ಹಾಗಾಗಿಯೇ ಬ್ರಹ್ಮಚಾರಿ – ಗೃಹಸ್ಥ –ವಾನಪ್ರಸ್ಥರಿಗೆ ನಿತ್ಯಕರ್ಮವಾಗಿ ವಿಧಾನವಾಗಿದೆ. ಪ್ರತಿವರ್ಷ ವಿಧಿವತ್ತಾಗಿ ಉಪಾಕರ್ಮ ಹಾಗೂ ಉತ್ಸರ್ಜನವನ್ನು ಮಾಡುವುದರಿಂದ ಅಧ್ಯಯನ ಮಾಡಿದ ವೇದಗಳು ಶಕ್ತಿಶಾಲಿಗಳಾಗುತ್ತವೆ. ಇವುಗಳನ್ನು ಮಾಡದೇ ಮಾಡಿದ ವೇದ ಜಪ ಅಥವಾ ಪಾರಾಯಣಗಳ ಫಲ ಲಭಿಸುವುದಿಲ್ಲ ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ.

ನೂತನೋಪಾಕರ್ಮವಾಗದ ಹೊರತು ವಿವಾಹಸಂಸ್ಕಾರವನ್ನು ಮಾಡುವಂತಿಲ್ಲ ಎಂದು ಶಾಸ್ತ್ರದಲ್ಲಿ ತಿಳಿಸಿದ್ದಾರೆ. ಉಪಾಕರ್ಮ – ಸಮಾವರ್ತನ – ವಿವಾಹ ಈ ಕ್ರಮದಲ್ಲಿ ಬಂದಿರುವುದರಿಂದ ಇದು ನಿಯಮ ಸಂಸ್ಕಾರ.


ಶ್ರಾವಣ – ಆಷಾಢ – ಭಾದ್ರಪದಗಳ ಹುಣ್ಣಿಮೆ ಅಥವಾ ಶಾಖಾ ಭೇದೇನ ವಿಹಿತ ಕಾಲಗಳಲ್ಲಿ, ಪ್ರಧಾನ ಕಾಲದಲ್ಲಿ ಶಾಖಾಧಿಪತಿಗಳ ಅಸ್ತ–ಸಂಕ್ರಾಂತಿ–ಗ್ರಹಣ ಇತ್ಯಾದಿ ದೋಷವಿದ್ದಾಗ ಪ್ರತಿನಿಧಿಯಾಗಿ ತಿಳಿಸಿದ ಕಾಲಗಳಲ್ಲಿ ಮಾಡಬೇಕು. ರಾಜನಿಗೊದಗಿದ ಆಪತ್ತು, ದೇಶಕ್ಷೋಭೆ. ಪರಕೀಯರ ಆಕ್ರಮಣ, ಕ್ಷಾಮ ಇತ್ಯಾದಿ ವಿಶೇಷ ಸಂದರ್ಭಗಳನ್ನೂ ಉಪಾಕರ್ಮ ಪ್ರತಿಬಂಧಕವೆಂಬುದಾಗಿ ತಿಳಿಸಿದ್ದಾರೆ. ಎಲ್ಲಾ ಕಾಲಗಳಲ್ಲೂ ದೋಷವಿದ್ದರೆ ಪ್ರಧಾನ ಕಾಲದಲ್ಲೇ ಶಾಂತಿಯನ್ನು ಮಾಡಿ ಉಪಾಕರ್ಮ ಮಾಡಬೇಕು. ಉಪಾಕರ್ಮದಲ್ಲಿ ಯಜ್ಞೋಪವೀತವನ್ನು **“ಹುತ್ವಾ, ದತ್ವಾ ಚ ಧಾರಯೇತ್”** ಎಂದು ಹೇಳಿರುವುದರಿಂದ ನೂತನವಾಗಿ ಧರಿಸಿದ್ದರೂ ಕೂಡ ಹೊಸತನ್ನು ಧರಿಸಲೇಬೇಕು.

ಉಪನಯನಾನಂತರದಲ್ಲಿ ನಿಯತ ವೇದಾಧ್ಯಯನವನ್ನು ಮಾಡದಿರುವ ಪಕ್ಷದಲ್ಲಿ ಉಪಾಕರ್ಮ ಬೇಕೆ? ಎಂಬ ಪ್ರಶ್ನೆ ಉಳಿಯಿತು. ಅದಕ್ಕೆ ಅಪಸ್ತಂಬ ಶ್ರೌತ ಸೂತ್ರದಲ್ಲಿ **“ಸಾವಿತ್ರೀಮಾತ್ರಸೊರೋಪಿ ನಾಸೌ ದುರ್ಬ್ರಾಹ್ಮಣೋ ಭವೇತ್”** ಎಂದು ತಿಳಿಸಿದ್ದಾರೆ. ಅಂದರೆ ಉಪನೀತನಾಗಿ ಅನಿವಾರ್ಯ ಕಾರಣದಿಂದ ವೇದಾಧ್ಯಯನ ಮಾಡದಿದ್ದರೂ ಸಂಧ್ಯಾವಂದನೆ – ಗಾಯತ್ರೀ ಜಪವನ್ನು ಮಾತ್ರ ಮಾಡುತ್ತಿದ್ದರೂ, ಉಪನೀತನಾಗಿ ವೇದಾಧ್ಯಯನ ಮಾಡದಿದ್ದರೆ ಬರು **“ದೌರ್ಬ್ರಾಹ್ಮಣ್ಯ”** ಎಂಬ ದೋಷ ಬರುವುದಿಲ್ಲ. ಹಾಗಾಗಿ ಅವನೂ ಉಪಾಕರ್ಮ ಮಾಡಿಕೊಳ್ಳಲೇಬೇಕು ಹಾಗೂ ಸಂಧ್ಯಾವಂದನೆಯ ಮಂತ್ರೋಚ್ಚಾರಣೆ ಮಾಡುವಾಗ ದೋಷ ಉಂಟಾದರೆ ಅಥವಾ ಗಾಯತ್ರೀ ಜಪದಲ್ಲೂ ದೋಷ ಉಂಟಾದರೆ, ಆ ದೋಷ ಪರಿಹಾರಕ್ಕೆ ಹಾಗೂ ಮುಂದೆ ವಿವಾಹಕ್ಕೆ ಅಧಿಕಾರ ಬರುವ ಉದ್ದೇಶದಿಂದಲೂ ಉಪನೀತರೆಲ್ಲರಿಗೂ ಉಪಾಕರ್ಮ ಬೇಕೇ ಬೇಕು. ಇದನ್ನು ತಿಳಿದು ಶ್ರದ್ಧೆಯಿಂದ ಅನುಷ್ಠಾನ ಮಾಡುತ್ತಾ ವಿಹಿತ ಫಲವನ್ನು ಹೊಂದಿ ಸಫಲರಾಗೋಣ.

**ಪ್ರೊ॥ ಸುಬ್ರಾಯ ವಿ. ಭಟ್ಟ (ಗುಂಜಗೋಡು)**
ಪ್ರಾಚಾರ್ಯರು, ರಾಜೀವ ಗಾಂಧೀ ಪರಿಸರ, ಶೃಂಗೇರಿ
ಮೊ. : 8088745862

**ಕೃಪೆ : ‘ಶ್ರೀ ಶಂಕರ ಕೃಪಾ’**




Land Trades®
BUILDERS & DEVELOPERS
www.landtrades.in

Office:
1st Floor, New Milagres Mansion
Falnir Road, Mangalore - 575001

Email:
info@landtrades.in
sales@landtrades.in

Building Trust. Delivering Value.

9880742159 9845084866 9886199769


## ಜ್ಞಾನ – ನುಡಿ

ನನಗೆ ಯಾವ ಕೆಲಸವನ್ನು ಮಾಡಲು ಬರುವುದಿಲ್ಲವೋ ಅದನ್ನೇ ಮೊದಲು ಮಾಡಲು ಪ್ರಯತ್ನಿಸುತ್ತೇನೆ. ಈ ರೀತಿ ಮಾಡುವುದರ ಮೂಲಕ ನಾನು ಹೊಸದನ್ನು ಕಲಿಯುತ್ತಲೇ ಇರುತ್ತೇನೆ. – **ಪಾಬ್ಲೊ ಪಿಕಾಸೊ**

## ಜ್ಞಾನ – ನಗೆ

ಒಬ್ಬ ಅಪರಾಧಿ ಜೈಲಿನಿಂದ ತಪ್ಪಿಸಿಕೊಂಡು ಹೋಗಿದ್ದ. ಕೆಲವು ಪೊಲೀಸ್ ಠಾಣೆಗಳಿಗೆ ಅವನ ಆರು ವಿವಿಧ ಭಂಗಿಗಳ ಫೋಟೊಗಳನ್ನು ಕಳುಹಿಸಲಾಯಿತು. ಕೆಲವು ದಿನಗಳು ಕಳೆದವು. ಅದೊಂದು ದಿನ ಒಂದು ಠಾಣೆಯ ಇನ್ಸ್‌ಪೆಕ್ಟರ್‌ರವರ ಪತ್ರ ಹೆಡ್‌ಕ್ವಾರ್ಟರ್ಸ್‌ಗೆ ಬಂತು. "ಸಾರ್, ನೀವು ಕಳುಹಿಸಿದ ಫೋಟೊದಲ್ಲಿನ ಐವರನ್ನು ಬಂಧಿಸಲಾಗಿದೆ, ಆರನೆಯವನಿಗಾಗಿ ಹುಡುಕಾಟ ನಡೀತಿದೆ. ಶೀಘ್ರವೇ ಅವನನ್ನೂ ಬಂಧಿಸಲಾಗುವುದು" ಎಂದು ಪತ್ರದಲ್ಲಿ ಬರೆಯಲಾಗಿತ್ತು. ಅದನ್ನು ಓದಿದ ಪೊಲೀಸ್ ಅಧಿಕಾರಿ ಮೂರ್ಛೆ ಹೋದ!

## ಜ್ಞಾನ – ಗಾದೆ

- ತಿಕ್ಕಿನಾಕ್ಲೆಕ್ ಕೈ ಮುಗಿಂಟ್‌ಲಾ, ಪುಣನ್ ಪೊತ್ತಾವಂತೆ ಬುಡಯೆರ್.
- ತಾಂಟೆಲಾ, ಮೊಂಟೆಲಾ ಗುತ್ತಿ ಗೆಪ್ಪೆರ ಪೋಯೆರ್.
- ತರೆಕ್ಕ್ ಮೈತ್‌ನ ನೀರ್ ಕಾರ್‌ಗ್ ಬರಪುಣು.

## ಜ್ಞಾನ – ವಿಸ್ಮಯ

- ಅಂಚೆ ಚೀಟಿಯ ಮೇಲೆ ದೇಶದ ಹೆಸರು ಇಲ್ಲದ ದೇಶ – **ಗ್ರೇಟ್ ಬ್ರಿಟನ್**
- ಚಲನಚಿತ್ರ ಮಂದಿರಗಳಿಲ್ಲದ ದೇಶ – **ಭೂತಾನ್**
- ಭಾರತದ ಪ್ರಥಮ ಬ್ಯಾಂಕ್ ಸ್ಥಾಪನೆ – **1770**


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*